**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 19.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎ ಕೆ ವಕೀಲರಿಂದ :**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದ ಶಿರೋನಾಮೆಯಲ್ಲಿ ನನ್ನ ವಯಸ್ಸು 31 ಮತ್ತು 32 ಅಂತ ಕಾಣಿಸಿರುವುದು ಸರಿ ಇರುವುದು. 1995 ರಲ್ಲಿ ನಾನು ಸುಮಾರು 4-5 ವರ್ಷದ ಬಾಲಕನಾಗಿದ್ದೇನು. ಪ್ರತಿವಾದಿ 2 ರಿಂದ 4 ರವರು ಕ್ರಮವಾಗಿ ಸಮಾರು 20, 21 ಮತ್ತು 22 ವಯಸ್ಸಿನವರು ಆಗಿದ್ದರು ಎಂದರೆ ಸರಿ. ನನಗೆ 18 ವರ್ಷಕ್ಕೆ ತಿಳುವಳಿಕೆ ಬಂದಿರುವುದು. ನನಗೆ 18 ವರ್ಷ ಪೂರ್ಣಗೊಂಡ ನಂತರ ಪ್ರತಿವಾದಿ 2 ರಿಂದ 4 ರವರು ಖರೀದಿ ಮಾಡಿರುವ ದಾವೆಗಳನ್ನು ದಾಖಲೆ ಮಾಡಿರುವುದಿಲ್ಲ, ಆದರೆ ನನ್ನ ಅಜ್ಜನಾದ ಬಾಳಪ್ಪ ಶಿವಪ್ಪ ಸಿದ್ದಾಪುರ ಇತನಿಗೆ ಹೇಳಿರುವೆನು. 1995 ರಲ್ಲಿ ನಮ್ಮ ಮನೆತನದ ಆಸ್ತಿಗಳಿಗೆ ಸಂಬಂದಪಟ್ಟಂತೆ ಮತ್ತು ಮನೆತನದಲ್ಲಿ ಆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಸಮಯದಲ್ಲಿ ಕುಟುಂಬದ ಅವಶ್ಯಕತೆಗಾಗಿ ಹಣವನ್ನು ಯಾರು ಎಲ್ಲಿಂದ ತಂದರು ಎಂದು ನನಗೆ ಮಾಹಿತಿ ಇರುವುದಿಲ್ಲ. ಆದರೆ 1995 ರಲ್ಲಿ ನನ್ನ ತಂದೆ ನಮಗೆ ಹೇಳುತ್ತಿದ್ದರು. ಈ ಮಾರಾಟ ಮಾಡಿರುವ ಜಮೀನುಗಳ ಬಗ್ಗೆಯೂ ಸಹ ನನ್ನ ತಂದೆಯ ಜೀವಿತಾವಧಿಯಲ್ಲಿ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಆ ಸಮಯದಲ್ಲಿ ನನ್ನ ಅಜ್ಜ ನನ್ನ ತಂದೆಗೆ ನಮ್ಮ ಕುಟುಂಬದ ಸಾಕಷ್ಟು ಆಸ್ತಿ ಇರುವುದು, ನಿನಗೆ ನೀಡಲು ಬರುವುದಾಗಿ ಎಂದು ಹೇಳಿರುವನು.

2. ನನ್ನ ವಾದ ಪತ್ರದ ಖಂಡಿಕೆ 6 ರಲ್ಲಿ ಹೇಳಿರುವ ಆಸ್ತಿ ನಂ. 175, 178/ಸಿ ಮತ್ತು 176 ಇವುಗಳ ದಾಖಲೆಗಳನ್ನು ತೆಗೆದುಕೊಳ್ಳಲು ಅರ್ಜಿಯನ್ನು ಕೊಟ್ಟಿರುವೆನು, ಆದರೆ 175 ರ ಆಸ್ತಿಯ ದಾಖಲೆ ಮಾತ್ರ ಸಿಕ್ಕಿದ್ದು , ಉಳಿದ 2 ಆಸ್ತಿಗಳ ದಾಖಲೆ ನೀಡಿರುವುದಿಲ್ಲ. ಈ ಆಸ್ತಿಗಳ ದಾಖಲೆಯನ್ನು ಪಡೆದುಕೊಳ್ಳಲು ಪಂಚಾಯಿತಿಗೆ ಸಲ್ಲಿಸಿದ ಅರ್ಜಿ ಪ್ರತಿಯನ್ನು ಈ

ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ. ಈ ಮೇಲೆ ಆಸ್ತಿಗಳನ್ನು ಈ ದಾವೆಯಲ್ಲಿ ದಾವಾ ಆಸ್ತಿಗಳಾಗಿ ಸೇರ್ಪಡೆ ಮಾಡದೆ ಇರುವುದರಿಂದ ಈ ಕಾರಣಕ್ಕೆ ಈ ದಾವೆಯು ಕಾನೂನಿನ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ಈ ದಾವಾ ಆಸ್ತಿಗಳನ್ನು ಅವರು ಖರೀದಿ ಮಾಡಿರುವ ಎಂಬ ಸಂಗತಿ ಗೊತ್ತಿದ್ದರೂ ಸಹಿತ ಅವರಿಗೆ ತೊಂದರೆ ನೀಡುವ ಸಲುವಾಗಿ ದುರುದ್ದೇಶ ಪೂರ್ವಕವಾಗಿ ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

3. 1995 ರಲ್ಲಿ ಪ್ರತಿವಾದಿ 2 ರಿಂದ 4 ರವರು ನನ್ನ ಅಜ್ಜ ಹಾಲಿನ ಡೈರಿಯ ವ್ಯಾಪಾರ ಮಡುತ್ತಿದ್ದು ಅದಕ್ಕಾಗಿ ಇವರು ಹಾಲು ಖರೀದಿ ಮಾಡಲು ಹೋಗುತ್ತಿದ್ದರು. ದಾವಾ ಆಸ್ತಿಗಳಲ್ಲಿ ನನಗೂ ಮತ್ತು ಉಳಿದ ವಾದಿಗಳಿಗೂ ಯಾವುದೇ ಪಾಲುಹಿಸ್ಸೆ ಇರದೆ ಇದ್ದರೂ ಸಹಿತ ಅವರಿಗೆ ತೊಂದರೆ ನೀಡುವ ಸಲುವಾಗಿ ನಾನು ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ ಪ್ರತಿವಾದಿ 8 ಮತ್ತ 9 ರವರ ಪರ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.19 18:02:27 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ